

# ಬಿಗ್ ಬೆನ್

## ಗಡಿಯಾರಗಳ ದೊಡ್ಡಣ್ಣ

**ಲಂಡನ್ ಹೆಸರನ್ನು ಪ್ರಪಂಚದ ನಕ್ಷೆಯಲ್ಲಿ ದೊಡ್ಡದಾಗಿ ಕಾಣಿಸುವ ಆಶಯದ 'ಬಿಗ್ ಬೆನ್', ಬೃಹತ್ ಗಡಿಯಾರಕ್ಕೆ ವಿಶ್ವಪ್ರಸಿದ್ಧಿ ಗಳಿಸಿದೆ. ಇಂಗ್ಲಿಷರ ಮಹತ್ವಾಕಾಂಕ್ಷೆಗಳ ಸ್ವರೂಪವನ್ನು ಅಭಿವ್ಯಕ್ತಿಸುವ ಈ ಗಡಿಯಾರ, ದೇಶದ ಪ್ರತಿ ಪ್ರಮುಖ ವಿದ್ಯಮಾನಗಳಲ್ಲಿ ಭಾಗಿಯಾಗುವ ರೀತಿಯೂ ಅನನ್ಯ.**

■ ಡಾ. ಪ್ರೇಮಲತ ಬಿ.

ಸಾಮಾನ್ಯವಾಗಿ ಮಹಾನಗರಗಳಲ್ಲಿ ಕಣ್ಮನ ತುಂಬುವ ಪ್ರಸಿದ್ಧ ನಿರ್ಮಾಣ, ಸ್ಮಾರಕ ಅಥವಾ ಕಟ್ಟಡವೊಂದಿರುತ್ತದೆ. ಐತಿಹಾಸಿಕ ಲಂಡನ್ ಮಹಾನಗರದಲ್ಲಿ ಇಂತಹ ಹಲವು ನಿರ್ಮಾಣಗಳಿವೆ. 'ಬಿಗ್ ಬೆನ್', 'ಲಂಡನ್ ಬ್ರಿಡ್ಜ್', 'ಲಂಡನ್ ಐ' ಇತ್ಯಾದಿ. ವೆಸ್ಟ್‌ಮಿನ್‌ಸ್ಟರ್ ಅರಮನೆಯ ಎಲಿಝಬೆತ್ ಬುರುಜಿನಲ್ಲಿರುವ 'ಬಿಗ್ ಬೆನ್' ಎನ್ನುವ ಪ್ರಸಿದ್ಧ ಗಡಿಯಾರವಂತೂ ಇಡೀ ರಾಷ್ಟ್ರವನ್ನು ಪ್ರತಿನಿಧಿಸುವ ಸಂಕೇತ.

ಲಂಡನ್ನಿನಲ್ಲಿನ ಎಲ್ಲ ವಿಶೇಷ ಸಂದರ್ಭಗಳಲ್ಲೂ ಈ ಗಡಿಯಾರಕ್ಕೆ ಬೇರೆ ಬೇರೆ ರೀತಿಯ ಸಿಂಗಾರ ಮಾಡುತ್ತಾರೆ. ಇತ್ತೀಚೆಗೆ, ಇಲ್ಲಿಯ ರಾಜನ ಪಟ್ಟಾಭಿಷೇಕ ನಡೆದಾಗ 'ಬಿಗ್ ಬೆನ್' ಹಲವು ವೇಷಗಳನ್ನು ಧರಿಸಿತ್ತು. ನವೆಂಬರಿನ ಹುತಾತ್ಮರ ದಿನದಂದು ಇದಕ್ಕೆ ಪಾಪ್ಪಿ ಹೂವಿನ ಡಿಜಿಟಲ್ ಶೃಂಗಾರ ನಡೆಯುತ್ತದೆ. ಪ್ರಸಿದ್ಧ ಆಡಳಿತಗಾರರು ನಿಧನರಾದಾಗ ಈ ಗಂಟೆ ಅವರ ಸಾಧನೆಗಳ ವರ್ಷದ ಸಂಖ್ಯೆಯನ್ನು ಬಾರಿಸುತ್ತದೆ ಇಲ್ಲವೇ ಮೌನವಹಿಸಿ ಇಡೀ ದೇಶದ ಜನತೆಯ ಮನಸ್ಸನ್ನು ಪ್ರತಿನಿಧಿಸುತ್ತದೆ. ಹೊಸ ವರ್ಷದ ಸಂಭ್ರಮಾಚರಣೆಯಲ್ಲಿ ಬಿಗ್ ಬೆನ್ ಸುತ್ತಲೂ ಪಟಾಕಿಗಳ ಹೂಗಳು ಅರಳುವುದನ್ನು ಇಡೀ ಪ್ರಪಂಚವೇ ನೋಡಿ ಆನಂದಿಸುತ್ತದೆ.

ಇಂಗ್ಲೆಂಡಿನ ರೇಡಿಯೊ ನಾಲ್ಕು ಮತ್ತು ಐ.ಟಿ. ಎನ್. ನ್ಯೂಸ್‌ನ ಮೊದಲಿಗೆ ಈ ಗಂಟೆಯ ನಿನಾದವನ್ನೂ ಬಳಸುತ್ತಾರೆ. ಬಿ.ಬಿ.ಸಿ.ಯವರು ತಮ್ಮ ನ್ಯೂಸ್ ಬಿತ್ತರಿಸುವಾಗ ಹಲವು ಬಾರಿ ಲಂಡನ್ ಎನ್ನುವುದನ್ನು ಬಿಗ್ ಬೆನ್‌ನ ದೃಶ್ಯದ ಮೂಲಕ ಜಗತ್ತಿಗೆ ಸಾರುತ್ತಿರುತ್ತಾರೆ. ಛಾಯಾಚಿತ್ರಕಾರರಿಗೂ ಈ ಬಿಗ್ ಬೆನ್‌ನ ಫೋಟೊ ತೆಗೆಯಲು ತೀವ್ರ ಹಂಬಲ. ಹಗಲು, ರಾತ್ರಿ, ಮಳೆ, ಬಿಸಿಲು, ಹಿಮ ಎಲ್ಲದರ ಜೊತೆ ಬಿಗ್ ಬೆನ್ ಅನ್ನು ರೂಪದರ್ಶಿಯನ್ನಾಗಿಸಿ ಚಿತ್ರ ತೆಗೆದು ಧನ್ಯರಾಗುತ್ತಾರೆ. ಪ್ರವಾಸಿಗಳು ಬಿಗ್ ಬೆನ್ ಅನ್ನು ತಮ್ಮ ಹಿಂಬದಿಯಲ್ಲಿ ಹಿಡಿಯಲು ಶ್ರಮಿಸುತ್ತಾರೆ. ಯಾಕೆಂದರೆ ಬಿಗ್ ಬೆನ್ ಎಂದರೆ ಅದು ಅನಧಿಕೃತವಾಗಿ ಜಗತ್ಪ್ರಸಿದ್ಧ 'ಲಂಡನ್' ಎಂದೇ ಆಗಿಬಿಟ್ಟಿದೆ.

ಕಳೆದ 5 ವರ್ಷಗಳಿಂದ ಈ ಗಡಿಯಾರ ಗಂಟೆ ಬಾರಿಸುವುದನ್ನು ನಿಲ್ಲಿಸಿಬಿಟ್ಟಿತ್ತು. ಇತ್ತೀಚೆಗೆ ಈ ಗಡಿಯಾರದ ಗಂಟೆಗಳು ಮತ್ತೆ ನಿನಾದ ಹೊರಡಿಸಿ ಸುದ್ದಿ ಮಾಡಿದವು.

